# <u>4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಮೈಸೂರು</u>

**ಎಸ್‌ಸಿ. 110/2017**

| | | | |
|---|---|---|---|
| ಸಾಕ್ಷಿದಾರರ ಹೆಸರು | ಃ | ರಾಕೇಶ | <u>ಪ್ರಮಾಣ ಮಾಡಿಸಿದ ದಿನಾಂಕಃ</u> |
| ತಂದೆ ಹೆಸರು | ಃ | ಶಿವಯ್ಯ | 15.02.2020 |
| ವಯಸ್ಸು | ಃ | 29 ವರ್ಷ | |
| ವೃತ್ತಿ | ಃ | ಅಪೋಲೋ ಆಸ್ಪತ್ರೆಯಲ್ಲಿ ಆನ್ ಡ್ಯೂಟಿ ಮ್ಯಾನೇಜರ್ ಕೆಲಸ | ಪ್ರಾ.ಸಾ. ಃ 06 |
| ವಾಸಸ್ಥಳ | ಃ | ಮೈಸೂರು | ಚಾ.ಸಾ. ಃ 09 |

<u>ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದಃ</u>

. ನಾನು *2016* ರಲ್ಲಿ ಅಪೋಲೋ ಆಸ್ಪತ್ರೆಯಲ್ಲಿ ಆನ್ ಡ್ಯೂಟಿ ಮ್ಯಾನೇಜರ್ ಆಟ ಕೆಲಸ ಮಾಡುತ್ತಿದ್ದೆನು. ಸಾಕ್ಷಿಯು ಅಮಾನತು ಪಂಚನಾಮೆಯ ಮೇಲೆ ಇರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಸದರಿ ಪಂಚನಾಮೆಯನ್ನು ನಿ.ಪಿ.*13* ಎಂದು, ಅದರ ಮೇಲಿರುವ ಸಾಕ್ಷಿಯ ಸಹಿಯನ್ನು ನಿ.ಪಿ.*13(ಎ)* ಎಂದು ಗುರುತಿಸಲಾಯಿತು. ನಾನು *2016* ರ ಸಾಲಿನಲ್ಲಿ ಅಪೋಲೋ ಆಸ್ಪತ್ರೆಯಲ್ಲಿ ಆನ್ ಡ್ಯೂಟಿ ಮ್ಯಾನೇಜರ್ ಎಂದು ಕೆಲಸ ಮಾಡುತ್ತಿದ್ದಾಗ ಪೊಲೀಸರು ನಿ.ಪಿ.*13* ರ ಮೇಲೆ ನನ್ನ ಸಹಿ ತೆಗೆದುಕೊಂಡಿರುತ್ತಾರೆ. ಪೊಲೀಸರು ಹಲ್ಲೆಗೊಳಗಾದ ಗಾಯಾಳು ಕೃಷ್ಣ ಈತನ *4* ಬಟ್ಟೆಗಳನ್ನು ನನ್ನ ಸಮಕ್ಷಮ ಜಪ್ತಿ ಮಾಡಿಕೊಂಡು ಅದರ ಮೇಲೆ ನನ್ನ ಸಹಿ ಇರುವ ಚೀಟಿಯನ್ನು ಅಂಟಿಸಿರುತ್ತಾರೆ. ನ್ಯಾಯಾಲಯದ ಮುಂದೆ ಇರುವ *4* ಬಟ್ಟೆಗಳನ್ನು ಸಾಕ್ಷಿಯು ನೋಡಿ ಗುರುತಿಸಿರುವುದಿಲ್ಲ.

<u>*ಈ ಹಂತದಲ್ಲಿ, ಈ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಸರ್ಕಾರಿ ಅಭಿಯೋಜಕರು ಅನುಮತಿ ಕೋರಿದ್ದಾರೆ. ಸಾಕ್ಷಿಯ ಹೇಳಿಕೆಯನ್ನು ಪರಿಶೀಲಿಸಿ ಅನುಮತಿ ನೀಡಲಾಯಿತು.*</u>

**ಪಾಟೀ ಸವಾಲುಃ ಸರ್ಕಾರಿ ಅಭಿಯೋಜಕರಿಂದಃ-**

. ದಿನಾಂಕಃ *23.12.2016* ರಂದು ಸಂಜೆ *7.30* ರಿಂದ *8.00* ಗಂಟೆಯ ಸಮಯದಲ್ಲಿ ಡಾ. ಶೀಬಾ ಇವರು ಕರ್ತವ್ಯದಲ್ಲಿದ್ದು ಗಾಯಾಳು ಕೃಷ್ಣ ಈತನನ್ನು ಆಸ್ಪತ್ರೆಗೆ ತಂದಿದ್ದರು. ಆತನ ಮೈಮೇಲೆ ಇದ್ದ ರಕ್ತಸಿಕ್ತ ಬಟ್ಟೆಗಳನ್ನು ತೆಗೆದು ತನಿಖಾಧಿಕಾರಿಯ ಮುಂದೆ ಹಾಜರುಪಡಿಸಿದ್ದು ಸದರಿ ತನಿಖಾಧಿಕಾರಿಯವರು ಮೃತ ಕೃಷ್ಣ ಈತನ *4* ಬಟ್ಟೆಗಳನ್ನು ನನ್ನ ಸಮಕ್ಷಮ ಜಪ್ತಿ ಮಾಡಿಕೊಂಡು ನಿ.ಪಿ.*13* ರಂತೆ ನನ್ನ ಸಮಕ್ಷಮ ಪಂಚನಾಮೆ ಮಾಡಿರುತ್ತಾರೆ ಎಂದು ಸೂಚಿಸುವುದು ಸರಿ ಇದೆ. ನ್ಯಾಯಾಲಯದ ಮುಂದೆ ಇರುವ *4* ಬಟ್ಟೆಗಳು ನನ್ನ ಸಮಕ್ಷಮ ಜಪ್ತಿ ಮಾಡಿದ್ದಾರೆ ಎಂದು ಕೇಳಿದ್ದಕ್ಕೆ ಸಾಕ್ಷಿ ನಾನು ಸಹಿ ಮಾಡಿರುತ್ತೇನೆ. ಆದರೆ ಬಟ್ಟೆಗಳನ್ನು ನಾನು ನೋಡಿಲ್ಲ ಎಂದು ಹೇಳುತ್ತಾರೆ. ನಾನು ಬಟ್ಟೆಗಳನ್ನು ಜಪ್ತಿ ಮಾಡಿರುವುದನ್ನು ನಾನು ನೋಡಿದರೂ ಸಹಿ ಆರೋಪಿಗಳಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲು ಃ ಆರೋಪಿ 1 ರಿಂದ 6 ಪರ ಟಿ.ಪಿ.ಡಿ. ವಕೀಲರಿಂದಃ-**

.ಆರೋಪಿ 1 ರಿಂದ 6 ಪರ ವಕೀಲರು ಪಾಟೀ ಸವಾಲು ಇಲ್ಲ ಎಂದು ಹೇಳಿದ್ದರಿಂದ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

**ಪಾಟೀ ಸವಾಲು ಃ ಆರೋಪಿ 7 ಪರ ಜೆ.ವಿ.ಆರ್, ವಕೀಲರಿಂದಃ-**

.ಆರೋಪಿ 7 ಪರ ವಕೀಲರು ಪಾಟೀ ಸವಾಲು ಇಲ್ಲ ಎಂದು ಹೇಳಿದ್ದರಿಂದ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

**ಪಾಟೀ ಸವಾಲು ಃ ಆರೋಪಿ 8, 10, 11 ಮತ್ತು 12 ರ ಪರ ಜಿ.ಎಂ.ಎನ್. ವಕೀಲರಿಂದಃ-**

. ಆರೋಪಿ 8, 10, 11 ಮತ್ತು 12 ಪರ ವಕೀಲರು ಪಾಟೀ ಸವಾಲು ಇಲ್ಲ ಎಂದು ಹೇಳಿದ್ದರಿಂದ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

**ಪಾಟೀ ಸವಾಲು ಃ ಆರೋಪಿ 9 ಪರ ಯು.ಎಸ್. ವಕೀಲರಿಂದಃ-**

. ಆರೋಪಿ 9 ಪರ ವಕೀಲರು ಪಾಟೀ ಸವಾಲು ಇಲ್ಲ ಎಂದು ಹೇಳಿದ್ದರಿಂದ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

***ಮರು ವಿಚಾರಣೆ:- ಇಲ್ಲ.***....

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)**

***ಓ ಹೇ ಕೇ ಸ ಇ ಎ ಒ.,***

***4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,***
**ಮೈಸೂರು**